## ಈ ಲೇಖನದ ವಿಷಯಾನುಕ್ರಮಣಿಕೆ


ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ 2

ನಾಲ್ಕನೆಯ ಪದ್ಯ 2

ಕಮಲಸಂಭವವಿನುತ 2

ವಾಸವನಮಿತ 5

ಮಂಗಳಚರಿತ 7

ದುರಿತಕ್ಷಮಿತ 8

ರಾಘವ 9

ವಿಶ್ವಪೂಜಿತ 10

ವಿಶ್ವ 11

ವಿಶ್ವಮಯ 11

ಅಮಿತವಿಕ್ರಮಭೀಮ 12

ಸೀತಾರಮಣ 15

ವಾಸುಕಿಶಯನ 16

ಖಗಪತಿಗಮನ 18

ಕಂಜಜನಯ್ಯ 19

# ವಿಶ್ವನಂದಿನಿ ಲೇಖನಮಾಲೆ — 23

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ನಾಲ್ಕನೆಯ ಪದ್ಯ

**ಕಮಲಸಂಭವವಿನುತ ವಾಸವ**
**ನಮಿತ ಮಂಗಳಚರಿತ ದುರಿತ-**
**ಕ್ಷಮಿತ ರಾಘವ ವಿಶ್ವಪೂಜಿತ ವಿಶ್ವ ವಿಶ್ವಮಯ |**
**ಅಮಿತವಿಕ್ರಮಭೀಮ ಸೀತಾ-**
**ರಮಣ ವಾಸುಕಿಶಯನ ಖಗಪತಿ-**
**ಗಮನ ಕಂಜಜನಯ್ಯ ರಕ್ಷಿಸು ನಮ್ಮನನವರತ ‖ ೪ ‖**

## ಕಮಲಸಂಭವವಿನುತ

ಸಂಭವ ಎಂದರೆ ಜನ್ಮ. ಕಮಲದಲ್ಲಿ ಜನ್ಮವನ್ನು ಪಡೆದ ಬ್ರಹ್ಮದೇವರಿಗೆ ಕಮಲಸಂಭವ ಎಂದು ಹೆಸರು. ಅವರಿಂದ ವಿನುತ ವಿಶೇಷವಾಗಿ ನಮಸ್ಕೃತನಾದವನು ಎಂದರ್ಥ.

ಪರಮಾತ್ಮನ ನಾಭಿಕಮಲದಲ್ಲಿ ಬ್ರಹ್ಮದೇವರು ಹುಟ್ಟಿ ಬಂದ ಬಗೆಯನ್ನು ಹಿಂದಿನ ಶ್ಲೋಕದಲ್ಲಿ ತಿಳಿದೆವು. ಆ ಕಮಲದಲ್ಲಿ ಬ್ರಹ್ಮದೇವರು ಹುಟ್ಟಿ ಬಂದ ಬಳಿಕ ಭಗವಂತ ಒಮ್ಮೆಲೇ ಅವರಿಗೆ ಕಾಣುವದಿಲ್ಲ. ಬ್ರಹ್ಮದೇವರು ಎಲ್ಲೆಡೆಯಲ್ಲಿ ತಮ್ಮನ್ನು ಆ ಕಮಲವನ್ನು ಸೃಷ್ಟಿಸಿದ ಭಗವಂತನಿಗಾಗಿ ಹುಡುಕಾಡುತ್ತಾರೆ. ಕಡೆಗೆ ಕಮಲದ ನಾಳದಲ್ಲಿ ಇಳಿದು ಅಪಾರವಾದ ಜಲವನ್ನು ಘೋರ ಕತ್ತಲನ್ನು ಕಾಣುತ್ತಾರೆ, ಭಗವಂತನನ್ನು ಕಾಣಲಾಗುವದಿಲ್ಲ. ಕಡೆಗೆ ಶ್ವಾಸನಿರೋಧಮಾಡಿ ಆ ಪದ್ಮದಲ್ಲಿ ಪದ್ಮಾಸನದಲ್ಲಿ ಕುಳಿತು ಕಣ್ಣು ಮುಚ್ಚಿ ಮನುಷ್ಯಮಾನದ ನೂರುವರ್ಷಗಳ ಕಾಲ ಭಗವಚ್ಚಿಂತನೆಯನ್ನು ಮಾಡುತ್ತಾರೆ. ಅದಾದ ಬಳಿಕ ಭಗವಂತ ಅವರಿಗೆ ಅವರ ಹೃದಯದಲ್ಲಿಯೂ ಗೋಚರಿಸುತ್ತಾನೆ, ಪದ್ಮನಾಭನಾಗಿಯೂ ಗೋಚರಿಸುತ್ತಾನೆ, ಸಮಗ್ರ ಬ್ರಹ್ಮಾಂಡವನ್ನು ವ್ಯಾಪಿಸಿದ ವಿರಾಣ್ಮೂರ್ತಿಯಾಗಿಯೂ ಗೋಚರಿಸುತ್ತಾನೆ. ಆಗ

ಬ್ರಹ್ಮದೇವರು ಪರಮಾತ್ಮನನ್ನು ಅತ್ಯಕ ಭಕ್ತಿಯಿಂದ ಪರಮಾದ್ಭುತವಾಗಿ ಸ್ತೋತ್ರ ಮಾಡುತ್ತಾರೆ. ಶ್ರೀಮದ್ ಭಾಗವತದ ಮೂರನೆಯಸ್ಕಂಧದ ಹತ್ತನೆಯ ಅಧ್ಯಾಯದಲ್ಲಿ ವೇದವ್ಯಾಸದೇವರು ಆ ಸ್ತೋತ್ರವನ್ನು ಸಂಗ್ರಹಿಸಿ ನೀಡಿದ್ದಾರೆ. ಹೀಗೆ ಸ್ತೋತ್ರಮಾಡಿದ ಬ್ರಹ್ಮದೇವರು ಪರಮಾತ್ಮನ ಪೂರ್ಣಾನುಗ್ರಹವನ್ನು ಪಡೆದು ಹದಿನಾಲ್ಕುಲೋಕಗಳಲ್ಲಿ ವಿಧವಿಧರೀತಿಯಲ್ಲಿ ಸಮಸ್ತ ಜೀವರಾಶಿಗಳನ್ನು ಸೃಜಿಸುತ್ತಾರೆ.

ಶ್ರೀರಾಮಾವತಾರದಲ್ಲಿ ರಾವಣನ ವಧೆಯ ನಂತರ ಬ್ರಹ್ಮದೇವರು ಸಕಲದೇವತೆಗಳೊಡನೆ ಭುವಿಗಿಳಿದು ಬಂದು ಶ್ರೀರಾಮನಿಗೆ ನಮಸ್ಕರಿಸಿ

**“ಜಿತಂ ಜಿತಂ ತೇಽಜಿತ ಲೋಕಭಾವನ”**

ಎಂಬುದಾಗಿ ಸ್ತುತಿಗೈಯುತ್ತಾರೆ. ಶ್ರೀಕೃಷ್ಣಾವತಾರದಲ್ಲಿ ಪರಮಾತ್ಮ ಗೋವಳರೊಡನೆ ಯಮುನಾತೀರದಲ್ಲಿ ಗೋವುಗಳನ್ನು ಮೇಯಿಸುವ ಸಂದರ್ಭದಲ್ಲಿ ಬಂದು ಅವನನ್ನು ಅನನ್ಯವಾಗಿ ಸ್ತುತಿಸುತ್ತಾರೆ.

ಆದ್ದರಿಂದ ಶ್ರೀಹರಿಯನ್ನು ಕಮಲಸಂಭವವಿನುತ ಎಂದು ದಾಸರು ಚಿಂತನೆ ಮಾಡುತ್ತಿದ್ದಾರೆ.

## ವಾಸವನಮಿತ

ವಾಸವ ಎಂದರೆ ಇಂದ್ರ. ಅವನಿಂದ ನಮಸ್ಕೃತನಾದವನು ವಾಸವನಮಿತ. ಭಗವಂತ ಶ್ರೀಕೃಷ್ಣನಾಗಿ ಅವತಾರ ಮಾಡಿ ಬಂದದ್ದನ್ನು ವಿಷ್ಣುಮಾಯೆಗೊಳಗಾಗಿದ್ದ ಇಂದ್ರ ಒಮ್ಮೆ ಮರೆತುಬಿಟ್ಟಿರುತ್ತಾನೆ. **"ವಿಸ್ಮೃತರಥಾಂಗ-ಧರಾವತಾರಃ"**. ಭಕ್ತನಾದ ಅವನಿಗೆ ಈ ರೀತಿಯ ಅವಜ್ಞೆ ಬರಬಾರದು ಎಂಬ ಕಾರಣಕ್ಕೆ ಅವನಿಗೆ ತನ್ನ ಮಾಹಾತ್ಮ್ಯವನ್ನು ತೋರಬಯಸಿದ ಶ್ರೀಕೃಷ್ಣ ನಂದಗೋಪ ಮೊದಲಾದವರೆಲ್ಲ ಇಂದ್ರನ ಉತ್ಸವಕ್ಕೆ ಅಣಿಯಾಗುತ್ತಿದ್ದಾಗ ಅದನ್ನು ಮಾಡದಂತೆ ತಡೆಯುತ್ತಾನೆ. ಅವರಿಂದ ಗೋವರ್ಧನಗಿರಿಗೆ ಪೂಜೆಯನ್ನು ಸಲ್ಲಿಸಿ ಆ ಪೂಜೆಯನ್ನು ಗೋವರ್ಧನಗಿರಿಯ ರೂಪದಲ್ಲಿ ನಿಂತು ತಾನೇ ಸ್ವೀಕರಿಸುತ್ತಾನೆ. ಇದರಿಂದ ಕ್ರುದ್ಧನಾದ ಇಂದ್ರ ಪ್ರಳಯಕಾಲವನ್ನು

ಉಂಟುಮಾಡುವ ಮೇಘಗಳಿಗೆ ಗೋಕುಲವನ್ನು ವಿನಾಶಮಾಡಲು ಆದೇಶಿಸುತ್ತಾನೆ. ಆನೆಯ ಸೊಂಡಿಲಿನ ಗಾತ್ರದಲ್ಲಿ ಸುರಿಯಲಾರಂಭಿಸಿದ ಮಳೆ ನಿರಂತರ ಏಳು ದಿನ ಏಳು ರಾತ್ರಿಗಳು ಸುರಿಯುತ್ತವೆ. ಶ್ರೀಕೃಷ್ಣ ಗೋವರ್ಧನಪರ್ವತವನ್ನು ಎತ್ತಿ ಹಿಡಿದು ಸಮಗ್ರ ಗೋಪಾಲಕರನ್ನು ಸಮಗ್ರ ಗೋವೃಂದವನ್ನು ರಕ್ಷಿಸುತ್ತಾನೆ.

ಪ್ರಳಯಕಾರಿಯಾದ ಮಳೆ ಏಳು ದಿವಸಗಳ ಕಾಲ ಸುರಿದರೂ ವ್ರಜನಿವಾಸಿಗಳಿಗೆ ಯಾವ ರೀತಿಯ ತೊಂದರೆಯೂ ಉಂಟಾಗದ್ದನ್ನು ಕಂಡು ಚಕಿತನಾದ ಇಂದ್ರ 'ಯಾರಿವನು ಶ್ರೀಕೃಷ್ಣ' ಎಂದು ಧ್ಯಾನಪರನಾಗುತ್ತಾನೆ. ಆಗ ಅವನ ದಿವ್ಯದೃಷ್ಟಿಗೆ ಶ್ರೀಕೃಷ್ಣ ಸಮಸ್ತಚರಾಚರಪದಾರ್ಥಗಳ ನಿಯಾಮಕನಾದ ಪರಬ್ರಹ್ಮ ಎಂದು ತಿಳಿಯುತ್ತದೆ. ತಾನು ಶ್ರೀಮನ್ನಾರಾಯಣನಿಗೆ ಅಪಚಾರ ಮಾಡಿದ್ದೇನೆ ಎಂದು ತಿಳಿದು ಅವನಿಗೆ ಮೈನಡುಕವುಂಟಾಗಿ ಬಿಡುತ್ತದೆ. ಬಳಿಕ ಸಮಸ್ತದೇವತಾವೃಂದದೊಂದಿಗೆ ಕೆಳಗಿಳಿದು ಬಂದು ಗೋವರ್ಧನೋದ್ಧಾರಿಯಾದ ಶ್ರೀಕೃಷ್ಣನ

ಪಾದಕಮಲಗಳಿಗೆ ಎರಗಿ "ಕ್ಷಂತವ್ಯಮೇವ ಭವತಾ ಮಮ ಬಾಲ್ಯಮೀಶ ತ್ವತ್ಸಂಶ್ರಯೋಧಿಸ್ಮಿ ಹಿ ಸದಾ" ನನ್ನ ಚಾಪಲವನ್ನು ಕ್ಷಮಿಸು ಎಂದು ಅನನ್ಯವಾಗಿ ಬೇಡಿಕೊಳ್ಳುತ್ತಾನೆ. ಭಗವಂತ ಕ್ಷಮೆ ತೋರಿದ ಬಳಿಕ ಅವನಿಗೆ ಅಭಿಷೇಕ ಮಾಡಿ ಗೋವಿಂದ ಎಂಬ ಹೆಸರನ್ನು ನೀಡಿ ದೇವಲೋಕಕ್ಕೆ ಮರಳುತ್ತಾನೆ. ವಾಸವನಮಿತ.

## ಮಂಗಳಚರಿತ

ಹೀಗೆ ಬ್ರಹ್ಮನಿಂದ ಇಂದ್ರನಿಂದ ಹಾಗೆಯೇ ಸಕಲ ದೇವತೆಗಳಿಂದ ಋಷಿಗಳಿಂದ ಭಗವಂತ ಸಂಸ್ತುತನೇ. ಒಬ್ಬೊಬ್ಬರ ಜತೆಗೂ ಒಂದೊಂದು ದಿವ್ಯಲೀಲೆಯನ್ನು ತೋರಿದವನೇ. ಹನುಮಂತ, ದುರ್ವಾಸ, ಶುಕ, ವಾಲಿ, ಅರ್ಜುನ, ಸುಗ್ರೀವ, ಜಾಂಬವಂತ, ಉದ್ಧವ, ಪ್ರಹ್ಲಾದ, ಧ್ರುವ, ವಸಿಷ್ಠ, ವಿಶ್ವಾಮಿತ್ರ, ಮಾರ್ಕಂಡೇಯ ಮುಂತಾದ ಅನಂತಸಜ್ಜೀವರನ್ನೂ ಭಗವಂತ ವಿಧವಿಧವಾಗಿ ಅನುಗ್ರಹಿಸಿದವನು. ಅವರನ್ನು ಉದ್ಧರಿಸಿದವನು. ಆ ಚರಿತ್ರೆಗಳನ್ನೆಲ್ಲ ಪೂರ್ಣ ತಿಳಿದವರ್ಯಾರು ?

ಆದರೆ ಆ ಎಲ್ಲ ಚರಿತ್ರೆಯೂ ಮಂಗಳಮಯವೇ. ಚಿಂತನೆ ಮಾಡುತ್ತಾ ಕುಳಿತವರ ಅಮಂಗಲವನ್ನೆಲ್ಲ ಕಡೆಗೆ ಪರಮ ಅಮಂಗಳವಾದ ಸಂಸಾರವನ್ನೇ ಕಳೆಯುವಂಥದು. ಮಂಗಳಚರಿತ.

## ದುರಿತಕ್ಷಮಿತ

ರಾಮ ರಾವಣನನ್ನು ಕೊಂದಾಗ ನನ್ನ ಭಕ್ತನನ್ನೇ ಕೊಂದೆಯಲ್ಲ ನನ್ನ ಜತೆಗೆ ಕದನಕ್ಕೆ ಬಾ ಎಂದು ರುದ್ರದೇವರು ಶ್ರೀರಾಮನನ್ನೇ ಯುದ್ಧಕ್ಕೆ ಅಹ್ವಾನಿಸುತ್ತಾರೆ. ಬರಿಯ ಧನುಷ್ಯದ ಠೇಂಕಾರದಿಂದ ಅವರ ಗರ್ವವನ್ನು ಮುರಿದ ಶ್ರೀರಾಮ ನಸುನಗುತ್ತ ನಿಂತರೆ ರುದ್ರದೇವರು ಕಾಲಿಗೆರಗಿ ಕ್ಷಮಿಸು **"ತ್ವದ್ವಿಷಯಂ ಮನಃ ಕುರು"** ಎಂದು ಬೇಡಿಕೊಳ್ಳುತ್ತಾರೆ. ಭಗವಂತ ಕ್ಷಮಿಸುತ್ತಾನೆ. ಇಂದ್ರನನ್ನು ಕ್ಷಮಿಸಿದ ಬಗೆಯನ್ನು ಈಗ ತಾನೇ ಕೇಳಿದೆವು. ಹಾಗೇಯೇ ಭೀಷ್ಮ ದ್ರೋಣ ಕರ್ಣ ಅಶ್ವತ್ಥಾಮರೆಲ್ಲ ಮಾಡಿದ ಪಾಪವನ್ನು ಮನ್ನಿಸು ಎಂದು ಕಡೆಯ ಕಾಲಕ್ಕೆ ಅಂಗಲಾಚಿ ಬೇಡುತ್ತಾರೆ. ಪರಮಾತ್ಮ

ಕ್ಷಮಿಸುತ್ತಾನೆ. ವೈಷ್ಣವದ್ರೋಹವನ್ನು ಮಾಡಿದೆ ಕ್ಷಮಿಸು ಎಂದು ವಿಶ್ವಾಮಿತ್ರರು ಬೇಡುತ್ತಾರೆ. ಭಗವಂತ ಕ್ಷಮಿಸುತ್ತಾನೆ. ಒಟ್ಟಾರೆ ಸಕಲ ಸಜ್ಜೀವರೂ ತಾವು ಮಾಡಿದ ಪಾಪಗಳಿಗೆ ಪರಮಾತ್ಮನಿಂದ ಕ್ಷಮೆಯನ್ನು ಪಡೆದವರೇ. ಕ್ಷಮೆ ನೀಡುವವರಲ್ಲಿ ಭಗವಂತನನ್ನು ಮೀರಿಸದವರು ಯಾರುಂಟು. ಅಂಥ ಕ್ಷಮಾಶೀಲನಾದ ಭಗವಂತನನ್ನು ಕನಕದಾಸರು ದುರಿತಕ್ಷಮಿತ ಎಂದು ಕರೆಯುತ್ತಿದ್ದಾರೆ. ದುರಿತಗಳು ಪಾಪಗಳು ಯಾರಿಂದ ಕ್ಷಾಂತವಾಗುತ್ತವೆಯೋ ಅವನು ದುರಿತಕ್ಷಮಿತ. ಬಾಗಿ ಬರುವ ಸಜ್ಜನರ ಸಕಲಪಾಪಗಳಿಗೆ ಕ್ಷಮೆ ನೀಡುವವನು ಎಂದರ್ಥ.

## ರಾಘವ

ರಘುವಿನ ವಂಶದಲ್ಲಿ ಅವತರಿಸಿ ಬಂದ ಶ್ರೀರಾಮನಿಗೆ ರಾಘವ ಎಂದು ಹೆಸರು.

## ವಿಶ್ವಪೂಜಿತ

ಶ್ರೀರಾಮಚಂದ್ರ ಸಕಲ ಜಗತ್ತಿನಿಂದ ಪೂಜಿತನಾದ ಹಾಗೆ ಮತ್ತ್ಯಾರೂ ಪೂಜಿತರಾಗಲಿಲ್ಲ. ಶ್ರೀರಾಮಚಂದ್ರನನ್ನು ಬರಿಯ ಅಯೋಧ್ಯೆಯ ಪ್ರಜೆಗಳು ಅಥವಾ ಉಳಿದ ಮಾನವರು ಮಾತ್ರ ಗೌರವಿಸುತ್ತಿರಲಿಲ್ಲ. ರಾಮನ ರಾಜ್ಯದಲ್ಲಿದ್ದ ಸಮಸ್ತ ಗಿಡಮರಗಳು, ಪಶುಪಕ್ಷಿಗಳು, ಕ್ರಿಮಿಕೀಟಗಳೂ ಸಹಿತ ಅವನನ್ನು ಗೌರವಿಸುತ್ತಿದ್ದವು. ಅರಮನೆಯಲ್ಲಿದ್ದ ನಾಯಿ ಕುದುರೆ ಆನೆಗಳಿಗಂತೂ ಶ್ರೀರಾಮನೆಂದರೆ ಪ್ರಾಣಕ್ಕಿಂತಲೂ ಮಿಗಿಲು. ರಾಮ ವನವಾಸಕ್ಕೆ ಹೊರಟ ಸಂದರ್ಭದಲ್ಲಿ ಲಾಯದಲ್ಲಿನ ಪ್ರಾಣಿಗಳೆಲ್ಲ ಅವನ ಹಿಂದೆ ಹೊರಡುತ್ತವೆ. ದಾರಿಯ ಮರಗಳೆಲ್ಲ ಅವನ ಹಿಂದೆ ಹೋಗಲಾಗದೆ ಅವನೆಡೆಗೆ ಬಾಗಿ ಬಾಗಿ ತಮ್ಮ ದುಃಖವನ್ನು ಸೂಸುತ್ತವೆ. ಹೀಗೆ ಸಮಗ್ರ ಸಮಸ್ತ ಜೀವರಾಶಿಗಳಿಂದ ಪೂಜಿತನಾದವನು ಶ್ರೀರಾಮ.

## ವಿಶ್ವ

ಜೀವರಾಶಿಗಳ ಜಾಗ್ರದವಸ್ಥೆಯನ್ನು ನಿಯಾಮಿಸುವ ಭಗವಂತನ ರೂಪ. ಎಲ್ಲ ಜೀವರ ಬಲಗಣ್ಣಿನಲ್ಲಿ ಪರಮಾತ್ಮ ಈ ರೂಪದಿಂದ ಸನ್ನಿಹಿತನಾಗಿರುತ್ತಾನೆ ಎಂದು ಶ್ರೀಮದಾಚಾರ್ಯರು ಮಾಂಡೂಕ್ಯೋಪನಿಷತ್ತಿನ ಭಾಷ್ಯದಲ್ಲಿ ತಿಳಿಸುತ್ತಾರೆ. ಈ ವಿಶ್ವನಾಮಕನಾದ ಭಗವಂತನಿಗೆ ಹತ್ತೊಂಬತ್ತು ಮುಖಗಳು. ಮಧ್ಯದ ಮುಖ ಆನೆಯ ಮುಖದಂತಿದ್ದರೆ ಎಡಬಲದ ಹದಿನೆಂಟು ಮುಖಗಳು ಮನುಷ್ಯರ ಮುಖದಂತಿವೆ. ಈ ರೂಪ ಮತ್ತು ತೈಜಸರೂಪದ ಉಪಾಸನೆಯಿಂದಲೇ ಗಣಪತಿ ಗಜಮುಖನಾದದ್ದು.

## ವಿಶ್ವಮಯ

ವಿಶ್ವ ಎನ್ನುವ ಶಬ್ದಕ್ಕೆ ಸಕಲವೂ ಎಂದರ್ಥ. ಹದಿನಾಲ್ಕು ಲೋಕಗಳ ಬ್ರಹ್ಮಾಂಡ ಎಂದೂ ಅರ್ಥ. ಇನ್ನೂ ಸಂಕೋಚಗೊಳಿಸಿದಾಗ ನಾವಿರುವ

ಪೃಥ್ವಿ ಎಂದರ್ಥ. ಭಗವಂತ ಈ ಪೃಥ್ವಿಯಿಂದಾರಂಭಿಸಿ ಅವ್ಯಾಕೃತ ಆಕಾಶದವರೆಗಿನ ‘ವಿಶ್ವ’ ಪದಾರ್ಥಗಳಲ್ಲಿ ವ್ಯಾಪಿಸಿದ್ದಾನೆ ಆದ್ದರಿಂದ ಅವನನ್ನು ವಿಶ್ವಮಯ ಎಂದು ಕರೆಯುತ್ತಾರೆ.

## ಅಮಿತವಿಕ್ರಮಭೀಮ

ಎಲ್ಲ ವೀರಪುರುಷರಲ್ಲಿರುವ ಸಾಮಾನ್ಯವಾದ ದೈಹಿಕ ಸಾಮರ್ಥ್ಯಕ್ಕೆ ಪರಾಕ್ರಮ ಎನ್ನುತ್ತಾರೆ. ಇನ್ನು ಸಾಮಾನ್ಯರಿಗೆ ಸಾಧ್ಯವಾಗದ ರೀತಿಯಲ್ಲಿ ಮಹಾಪ್ರಯತ್ನವನ್ನು ಮಾಡಿ ಗಳಿಸುವ ಅತೀಸಾಮರ್ಥ್ಯಕ್ಕೆ ವಿಕ್ರಮ ಎನ್ನುತ್ತಾರೆ. ಅಮರದಲ್ಲಿ ಈ ಮಾತು ಬಂದಿದೆ. **“ಶಕ್ತಿಃ ಪರಾಕ್ರಮಪ್ರಾಣೌ ವಿಕ್ರಮಸ್ತು ಅತಿಶಕ್ತಿತಾ”** ಎಂದು. ಹೀಗಾಗಿ ವಿಕ್ರಮ ಎಂದರೆ ಲೋಕದಲ್ಲಿ ಸಾಮಾನ್ಯವಾಗಿ ನೋಡಲು ಕಾಣಸಿಗದ ಅದ್ಭುತ ಪರಾಕ್ರಮ ಎಂದರ್ಥ. ಶ್ರೀರಾಮನ ಸಾಮರ್ಥ್ಯವನ್ನು ಆ ವಿಕ್ರಮ ಎನ್ನುವ ಶಬ್ದವೂ ಬಣ್ಣಿಸಲು ಸಣ್ಣದೇ ಎಂದು ದಾಸರು ಅಮಿತವಿಕ್ರಮ ಎಂಬ ಶಬ್ದವನ್ನು

ಬಳಸುತ್ತಾರೆ. ಇವನ ಅದ್ಭುತ ಸಾಮರ್ಥ್ಯಕ್ಕೆ ಎಲ್ಲೆಯೇ ಇಲ್ಲ. ಮಿತಿಯಿರದಂಥ ಅನಂತವಾದ ಮಹಾಸಾಮರ್ಥ್ಯವನ್ನು ಹೊಂದಿದವನು ಶ್ರೀರಾಮ. ಈ ರೀತಿಯ ಅದ್ಭುತ ತೋಳ್ಬಲವಿದ್ದುದರಿಂದಲೇ ಶತ್ರುಗಳಿಗೆ ಭಯಂಕರನಾದವನು. ಭೀಮ ಎಂದರೆ ಭಯಂಕರ ಎಂದರ್ಥ. **“ಭೀಮಂ ಘೋರಂ ಭಯಂಕರಮ್”.**

ಶ್ರೀರಾಮನ ಮಹಾಸಾಮರ್ಥ್ಯದ ಬಗ್ಗೆ ಅನುದ್ಬಲರಾದ ನಮ್ಮಂಥವರು ಮಾತನಾಡಿದರೆ ಬೆಲೆಯೇ ಇಲ್ಲ. ಹುಟ್ಟುತ್ತಲೇ ಅಂತರಿಕ್ಷಕ್ಕೆ ನೆಗೆದು, ಸೂರ್ಯನ ಎದುರಾಗಿ ಹಿಂದು ಮುಂದು ಚಲಿಸುತ್ತಾ ಶಾಸ್ತ್ರಾಧ್ಯಯನವನ್ನು ಮಾಡಿದ, ನೂರು ಯೋಜನದ ಸಮುದ್ರವನ್ನು ಸಹಜವಾಗಿ ಹಾರಿದ, ದೇಹವನ್ನು ಭೂಮ್ಯಾಕಾಶಗಳು ಒಂದಾಗುವಂತೆ ಹಿಗ್ಗಿಸಿ, ಒಂದು ಬೆಕ್ಕಿನ ಮರಿಯ ಗಾತ್ರಕ್ಕೂ ಕುಗ್ಗಿಸಿ, ಹಿಮಾಲಯದ ಬಳಿಯಿದ್ದ ಪರ್ವತವನ್ನು ಲಂಕೆಗೆ ತಂದು ಲಂಕೆಯಿಂದಲೇ ಅದನ್ನು ಬಿಸುಟು ಮತ್ತೆ ಕಿತ್ತ ಸ್ಥಳದಲ್ಲಿಯೇ ಸರಿಯಾಗಿ

ನೆಲೆಗೊಳ್ಳುವಂತೆ ಮಾಡಿದ, ಒಟ್ಟಾರೆ ಇಡಿಯ ಜಗತ್ತು ಕಂಡು ಕೇಳರಿಯದಂತಹ ವಿಸ್ಮಯಗಳನ್ನು ಮಾಡಿ ತೋರಿಸಿದ ಮಹಾಪರಾಕ್ರಮಿಯಾದ ಹನುಮಂತ ಶ್ರೀರಾಮನ ಬಗ್ಗೆ ಅವನ ಪರಾಕ್ರಮದ ಬಗ್ಗೆ ಹೇಳುತ್ತಾನೆ. ಅದೂ ರಾವಣನ ಸಭೆಯಲ್ಲಿ ರಾವಣನಿಗೆ ಇದುರಾಗಿ ನಿಂತು ರಾವಣನಿಗೆ ಬುದ್ಧಿವಾದ ಹೇಳುತ್ತಾ. ಆ ಮಾತನ್ನು ಅರ್ಥ ಮಾಡಿಕೊಂಡರೆ ರಾಮನ ಸಾಮರ್ಥ್ಯದ ಲೇಶಾಂಶವಾದರೂ ನಮ್ಮ ಅರಿವಿಗೆ ಬಂದೀತು

**“ಬ್ರಹ್ಮಾ ಸ್ವಯಂಭೂಶ್ಚತುರಾನನೋ ವಾ**
**ರುದ್ರಸ್ತ್ರಿನೇತ್ರಸ್ತ್ರಿಪುರಾಂತಕೋ ವಾ |**
**ಇಂದ್ರೋ ಮಹೇಂದ್ರಃ ಸುರನಾಯಕೋ ವಾ**
**ಸ್ಥಾತುಂ ನ ಶಕ್ತಾ ಯು ರಾಘವಸ್ಯ |**

**ದೇವಾಶ್ಚ ದೈತ್ಯಾಶ್ಚ ನಿಶಾಚರೇಂದ್ರ-**
**ಗಂಧರ್ವವಿದ್ಯಾಧರನಾಗಯಕ್ಷಾಃ |**
**ರಾಮಸ್ಯ ಲೋಕತ್ರಯನಾಯಕಸ್ಯ**
**ಸ್ಥಾತುಂ ನ ಶಕ್ತಾಃ ಸಮರೇಷು ಸರ್ವೇ”**
(ವಾ.ರಾಮಾಯಣ ೫/೫೧/೪೩)

"ಹದಿನಾಲ್ಕು ಲೋಕವನು ಸೃಷ್ಟಿಸುವ ಆ ಬ್ರಹ್ಮ
ಬಲವಂತ ಉರಿಗಣ್ಣ ಶಿವನು
ಯಮಧರ್ಮ ಸೂರ್ಯ ವಿಧು ಇಂದ್ರ ಸ್ಕಂದ
ಮೊದಲಾದ ದೇವರೆಲ್ಲ |
ನಾಗರಾಕ್ಷಸಯಕ್ಷಪಕ್ಷಿಗಳ ಜತೆಗೂಡಿ ಕದನವನು
ಸಾರಿ ನಿಲಲು
ಶ್ರೀರಾಮ ತಾ ನಸುನಗುತ ಪಿಡಿವ
ಬಾಣವೊಂದಕ್ಕೆ ನಿಲಲಾರರಿವರು"

## ಸೀತಾರಮಣ

ಇಂಥ ಅದ್ಭುತಪರಾಕ್ರಮದ ನೆಲೆಮನೆಯಾದರೂ ಶ್ರೀರಾಮ ಕಠೋರನಲ್ಲ. ಕಾರಣ ಅವನು ಸೀತಾರಮಣ. ಮೂಲರೂಪದಲ್ಲಾಗಲೀ ಅವತಾರರೂಪಗಳಲ್ಲಾಗಲೀ ಅನಂತಾನಂತಕಾರ್ಯಗಳನ್ನು ಒಮ್ಮೆಲೇ ಮಾಡುವ ಆ ಭಗವಂತ ತನ್ನನ್ನು ಇಡಿಯ ಚೇತನಪ್ರಪಂಚಕ್ಕಿಂತಲೂ ಮಿಗಿಲಾಗಿ ಆರಾಸುವ ಭಕ್ತಾಗ್ರಣಿಯಾದ ಮಹಾಲಕ್ಷ್ಮಿಗೆ ಸೀತೆಗೆ ಪೂರ್ಣಾನಂದವನ್ನು ನೀಡುವ ಪ್ರೇಮಮೂರ್ತಿ.

ರಾವಣನನ್ನು ಕೊಂದು ಹಿಂತಿರುಗಿದ ಶ್ರೀರಾಮ ಪೂರ್ಣಚಂದ್ರನಿಂದ ಶೋಭಾಯಮಾನವಾದ, ವಿಧವಿಧವಾದ ಪುಷ್ಪಗಳಿಂದ ಪರಿಶೋಭಿತವಾದ ಅಶೋಕವೃಕ್ಷಗಳಿಂದ ಕಂಗೊಳಿಸುವ, ಸೀತೆಗೆ ಅತ್ಯಂತ ಪ್ರಿಯವಾದ ಉದ್ಯಾನದಲ್ಲಿ ಗಂಧರ್ವ ವಿದ್ಯಾಧರ ಅಪ್ಸರೆಯರಿಂದ ನಿರಂತರ ಸೇವಿತನಾಗಿ ಅವಳಿಗೆ ಪರಿಪೂರ್ಣ ಸುಖವನ್ನು ನೀಡುತ್ತಾನೆ. ಸೀತಾರಮಣ.

## ವಾಸುಕಿಶಯನ

ಕದ್ರೂವಿನ ಮೊದಲನೆಯ ಮಗ ಶೇಷದೇವರು. ಎರಡನೆಯವನು ವಾಸುಕಿ. ಪರಸ್ಪರ ಕಚ್ಚಾಡುವ ತಮ್ಮಂದಿರನ್ನು ಕಂಡು, ಸವತಿಮಾತ್ಸರ್ಯವೇ ಮೈವೆತ್ತಿ ಬಂದವಳ ಹಾಗೆ ವರ್ತಿಸುತ್ತಿದ್ದ ತಾಯಿಯನ್ನು ಕಂಡು ಬೇಸರಗೊಂಡ ಶೇಷದೇವರು ಅವರೊಡನೆ ಬದುಕಲು ಇಷ್ಟವಿಲ್ಲದೆ ತಪಸ್ಸಿಗೆ ತೆರಳಿ ಬಿಡುತ್ತಾರೆ. ಗಂಧಮಾದನ ಹಿಮಾಲಯ ಪುಷ್ಕರ ಗೋಕರ್ಣ ಮುಂತಾದ ಕ್ಷೇತ್ರಗಳಲ್ಲಿ ತಪಸ್ಸು ಮಾಡುತ್ತಾ ಭಗವಂತನನ್ನು ಒಲಿಸಿಕೊಂಡು

ಅವನಿಗೆ ಹಾಸಿಗೆಯಾಗುವ ಸೌಭಾಗ್ಯವನ್ನು ಪಡೆದುಕೊಳ್ಳುತ್ತಾರೆ ಮತ್ತು ಬ್ರಹ್ಮದೇವರ ಆದೇಶದಂತೆ ಭೂಮಿಯ ಅಧೋಭಾಗಕ್ಕೆ ತೆರಳಿ ಅಲ್ಲಿ ಭೂಮಿಯನ್ನು ಹೊತ್ತು ನಿಲ್ಲುವ ವಿಷ್ಣುಸೇವೆಯನ್ನು ಸಲ್ಲಿಸುತ್ತಿದ್ದ ತಮ್ಮ ಮೂಲರೂಪದ ಜತೆಯಲ್ಲಿ ಐಕ್ಯವನ್ನು ಹೊಂದುತ್ತಾರೆ. ವಾಸುಕಿ ಉಳಿದ ಸರ್ಪಗಳಿಗೆ ರಾಜನಾಗಿ ನಾಗರಾಜ ಎಂದು ಕರೆಸಿಕೊಳ್ಳುತ್ತಾನೆ. ಶೇಷನ ತಮ್ಮ ವಾಸುಕಿ ಭಗವಂತನಿಗೆ ಶಯನನಲ್ಲ. ಶೇಷದೇವರೇ ಪರಮಾತ್ಮನಿಗೆ ಹಾಸಿಗೆಯಾದವರು. ಆದರೂ ದಾಸರು ಪರಮಾತ್ಮನನ್ನು ವಾಸುಕಿಶಯನ ಎಂದೇ ಕರೆಯುತ್ತಿದ್ದಾರೆ. ಕಾರಣ, ವಾಸುಕಿ ಎಂಬ ಹೆಸರು ಪ್ರಧಾನವಾಗಿ ಶೇಷನಿಗೇ ಇರುವಂಥದ್ದು. ವಸು ಎಂದರೆ ವಸುಮತಿಯಾದ ಪೃಥ್ವೀ. ಅದನ್ನು 'ಕೇ' ತಲೆಯ ಮೇಲೆ ಹೊತ್ತವನು ವಸುಕ, ಅರ್ಥಾತ್ ಭೂಮಿಯನ್ನು ಹೊತ್ತ ಮೂಲರೂಪದ ಶೇಷದೇವರು. ಆ ಶೇಷದೇವರೇ ಮತ್ತೊಂದು ರೂಪದಿಂದ ಕದ್ರೂವಿನ ಹೊಟ್ಟೆಯಲ್ಲಿ

ಹುಟ್ಟಿಬರುತ್ತಾರೆ. ಆದ್ದರಿಂದ ಆ ರೂಪಕ್ಕೆ ವಾಸುಕಿ ಎಂದು ಹೆಸರು. ಮರುತ ಎಂದು ಕರೆಸಿಕೊಳ್ಳುವ ಮುಖ್ಯಪ್ರಾಣದೇವರ ಅವತಾರನಾದ ಹನುಮಂತ ಮಾರುತಿ ಎಂದು ಕರೆಸಿಕೊಳ್ಳುವ ಹಾಗೆ. ಹಿರಿಯರ ಹೆಸರನ್ನು ಮಕ್ಕಳಿಗೆ ಇಡುವಂತೆ ವಾಸುಕಿ ಎನ್ನುವ ಶೇಷದೇವರ ಹೆಸರನ್ನು ತಮ್ಮ ಎರಡನೆಯ ಮಗನಿಗೆ ಕಶ್ಯಪ ಕದ್ರೂಗಳು ನೀಡುತ್ತಾರೆ. ಹೀಗಾಗಿ ವಾಸುಕಿ ಎನ್ನುವ ಹೆಸರು ಪ್ರಧಾನವಾಗಿ ಶೇಷದೇವರನ್ನೇ ತಿಳಿಸುತ್ತದೆ. ಈ ತತ್ವವನ್ನು ಅನುಸಂಧಾನ ಮಾಡುತ್ತಿರುವ ದಾಸರು ಶೇಷಶಯನನಾದ ಭಗವಂತನನ್ನು ವಾಸುಕಿಶಯನ ಎಂದೇ ಕರೆಯುತ್ತಿದ್ದಾರೆ.

## ಖಗಪತಿಗಮನ

ಶೇಷನನ್ನು ಹಾಸಿಗೆಯನ್ನಾಗಿಸಿಕೊಂಡ ಆ ನರಹರಿ ಕಶ್ಯಪ ವಿನತೆಯರ ಮಗ ವೈನತೇಯನನ್ನು ತನ್ನ ವಾಹನನ್ನಾಗಿ ಮಾಡಿಕೊಂಡ. ಖ ಎಂದರೆ ಆಕಾಶ. ಖಗ ಎಂದರೆ ಆಕಾಶದಲ್ಲಿ ಸಂಚರಿಸುವ (ಖೇ ಗಚ್ಛಂತಿ) ಪಕ್ಷಿಗಳು. ಖಗಪತಿ ಅವುಗಳ

ಅನಾಥನಾದ ಗರುಡ. ಅವನನ್ನು ತನ್ನ ಗತಿಸಾಧನವನ್ನಾಗಿ ಅರ್ಥಾತ್ ವಾಹನವನ್ನಾಗಿ ಉಳ್ಳವನು ಖಗಪತಿಗಮನ, ಶ್ರೀಹರಿ.

## ಕಂಜಜನಯ್ಯ

ಕಂ ಎಂದರೆ ನೀರು. ಅದರಲ್ಲಿ ಹುಟ್ಟುವ ಪದ್ಮಕ್ಕೆ ಕಂಜ ಎಂದು ಹೆಸರು. ಆ ಪದ್ಮದಲ್ಲಿ ಹುಟ್ಟಿದ ಬ್ರಹ್ಮದೇವರು ಕಂಜಜ.

ಈ ನೀರನ್ನೂ, ಅದರಲ್ಲಿ ಪದ್ಮವನ್ನೂ, ಅದರಲ್ಲಿ ಬ್ರಹ್ಮದೇವರನ್ನೂ ಹುಟ್ಟಿಸುವ ಅಯ್ಯ ಅಪ್ಪ ಶ್ರೀಹರಿ. ಕಂಜಜನಯ್ಯ ‖ ೪ ‖

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491